ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳಬಾರದೆಂದು ಹೇಳಿದ್ದೇವೆ. ಡೊನೇಷನ್ ರೂಪದಲ್ಲಿ ಯಾವುದೇ ಕಾಲೇಜಿನಲ್ಲಿ ಹಣ ಪಡೆದಿರುವ ನಿರ್ದಿಷ್ಟ ದೂರಿನ ಬಗ್ಗೆ ಮಾನ್ಯ ಸದಸ್ಯರು ಹೇಳಿದರೆ ಆ ಬಗ್ಗೆ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಡಾ. ಎಚ್. ಎಲ್. ತಿಮ್ಮೇಗೌಡ —ಸೆಂಟ್ ಜಾನ್ ಮೆಡಿಕಲ್ ಕಾಲೇಜು ಹಾಗೂ ವಂಣಿಪಾಲದ ಕಸ್ತೂರಿಬಾ ಕಾಲೇಜಿನಲ್ಲಿ ಸರ್ಕಾರದ ಕೋಟಾ ಏನು ೧೫ ಪರ್ಸೆಂಟ್ ಎಂದು ಇದೆ, ಅಂತಹ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವರು ಒಪ್ಪಿಗೆ ಕೊಡುತ್ತಿಲ್ಲವೆಂದು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅಧ್ಯಕ್ಷರೇ, ಮೊದಲನೆಯದಾಗಿ ಮಣಿಪಾಲ್ ಮೆಡಿಕಲ್ ಕಾಲೇಜು ಮತ್ತು ಸೆಂಟ್‌ಜಾನ್ ಮೆಡಿಕಲ್ ಕಾಲೇಜುಗಳಿಗೆ ಸರ್ಕಾರದಿಂದ ೧೫ ಪರ್ಸೆಂಟ್ ಜನರನ್ನು ತೆಗೆದುಕೊಳ್ಳಬೇಕೆಂದು ಕಳುಹಿಸಿಕೊಟ್ಟಿಲ್ಲ. ಆದುದರಿಂದ ೨ನೇ ಪ್ರಶ್ನೆ ಉದ್ಭವವಾಗುವುದಿಲ್ಲ. ಅವರೇ ಕ್ಲಿನಿಕಲ್ ಫೆಸಲಿಟಿ ಇಟ್ಟುಕೊಂಡಿರುವುದರಿಂದ ಕ್ಯಾಪಿಟೇಷನ್ ಶುಲ್ಕ ವಸೂಲಿ ಮಾಡುವ ವಿಷಯ ಉದ್ಭವವಾಗುವುದಿಲ್ಲ. ನಮ್ಮ ಸರ್ಕಾರಿ ಕೋಟಾದ ವಿದ್ಯಾರ್ಥಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟಿಲ್ಲ.

ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಜಾರಿಗೊಳಿಸುವುದು

೨೩೩. ಶ್ರೀ ಪಿ. ರಾಂದೇವ್ (ಮುಲ್ಲೇಶ್ವರಂ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಯುವಜನ ಸೇವೆಗಳ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಕನ್ನಡವನ್ನು ಆಡಳಿತ ಭಾಷೆಯಾಗಿ ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೆ ತರಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಮ್ಮಿಕೊಂಡಿರುವ ಯೋಜನೆಗಳಾವುವು ?

ಆ) ಈ ಯೋಜನೆಗಳನ್ನು ಪೂರೈಸಲು ಎಷ್ಟು ಕಾಲ ಬೇಕಾಗುತ್ತದೆ ?

ಇ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದಂತೆ, ನೇಮಕಾತಿ ಸಮಿತಿ ರಚನೆಯಾಗಿದೆಯೇ ? ಹಾಗಿದ್ದಲ್ಲಿ ಈ ಇಲಾಖೆಗೆ ಅಗತ್ಯವಾಗಿರುವ ಸಿಬ್ಬಂದಿಯನ್ನು ಶೀಘ್ರವಾಗಿ ನೇಮಕ ಮಾಡಲಾಗುವುದೇ ?

ಶ್ರೀ ಜೀವರಾಜ ಆಳ್ವ (ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಗೆಜೆಟೆಡ್ ಅಧಿಕಾರಿಗಳಿಗೆ, ನಾನ್ ಗೆಜೆಟೆಡ್ ಅಧಿಕಾರಿಗಳಿಗೆ, ನ್ಯಾಯಾಂಗ ಇಲಾಖೆಯ ಅಧಿಕಾರಿಗಳಿಗೆ, ಹಾಗೂ ಪ್ರಾಸಿಕ್ಯೂಷನ್ ಇಲಾಖೆಯ ಅಧಿಕಾರಿಗಳಿಗೆ, ನ್ಯಾಯಾಂಗ ಇಲಾಖೆಯ ನೌಕರರಿಗೆ, ಸಚಿವಾಲಯದ ಗೆಜೆಟೆಡ್ ಅಧಿಕಾರಿಗಳಿಗೆ ಕನ್ನಡೇತರರಿಗೆ ಕನ್ನಡ ತರಬೇತಿ, ಹಾಗೂ ಕನ್ನಡ ಬೆರಳಚ್ಚು, ಶೀಘ್ರಲಿಪಿಗಾರರ ತರಗತಿಗಳನ್ನು, ವಿಚಾರ ಸಂಕೀರ್ಣಗಳನ್ನು ಏರ್ಪಡಿಸುವುದು, ನಿರುದ್ಯೋಗ ಬೆರಳಚ್ಚುಗಾರರಿಗೆ ಜಾಬ್ ಟೈಪಿಂಗ್ ಮಾಡಲು ಧನಸಹಾಯ, ನೆರೆರಾಜ್ಯದ ವಿವಿಧ ಬಿ.ವಿ.ಗಳಲ್ಲಿ ಎಂ.ಎ.ಎಂ ಫಿಲ್. ಹಾಗೂ ಕನ್ನಡದಲ್ಲಿ ಪರಿಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಕನ್ನಡವನ್ನು ಆಡಳಿತ ಭಾಷೆಯಾಗಿ ಅನುಷ್ಠಾನಗೊಳಿಸಲು ಪೂರಕವಾದ ಸಾಹಿತ್ಯ ರಚನೆ ಹಾಗೂ ಪ್ರಕಟಣೆ, ಬಹುಮಾನ, ಆಡಳಿತ ಸಾಹಿತ್ಯ ಪೂರೈಕೆ, ಇಲಾಖೆಯ ತ್ರೈಮಾಸಿಕ ವಾರ್ತಾ ಪತ್ರಿಕೆಯ ಪ್ರಕಟಣೆ, ಲೇಖಕರಿಗೆ ಧನಸಹಾಯ, ಇಲಾಖಾವಾರು ಪಾರಿಭಾಷಿಕ ಶಬ್ದಕೋಶಗಳ ಪರಿಷ್ಕರಣ ಕಾನೂನು, ಪದವಿವರಣಾಕೋಶದ ರಚನೆ, ಕಾನೂನು ಪುಸ್ತಕಗಳ ಭಾಷಾಂತರ, ಇಲಾಖಾ ಪಾರಿಭಾಷಿಕ ಶಬ್ದಕೋಶಗಳನ್ನು ಸಿದ್ಧಪಡಿಸುವುದು, ೧೮ ಜಿಲ್ಲಾ ವಿಷಯಕೋಶಗಳ ಭಾಷಾಂತರ, ಕೆ.ಸಿ.ಆರ್.ಎಸ್.ಆರ್., ಕೆ.ಎಫ್.ಸಿ. ಕೆ.ಟಿ.ಸಿ.ಯ ಪರಿಷ್ಕರಣ, ಬ್ಯಾಂಕ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಂದು ಶಬ್ದಕೋಶದ ಸಿದ್ಧತೆ, ಪ್ರಾದೇಶಿಕ ಭಾಷಾ ಪ್ರಭೇದ ನಿಘಂಟು ರಚನೆ, ಆಯಾ ಇಲಾಖೆಗಳ ಕನ್ನಡ ಕೈಪಿಡಿಗಳನ್ನು ಸಿದ್ಧಪಡಿಸುವುದು. ಹೊಸ ಇಲಾಖಾ ಪಾರಿಭಾಷಿಕ ಶಬ್ದಕೋಶ

ಗಳನ್ನು ಸಿದ್ಧಪಡಿಸುವುದು, ಪ್ರಾದೇಶಿಕ ಭಾಷಾ ಪ್ರಭೇದ ನಿಘಂಟು ರಚನೆ, ಸಚಿವಾಲಯ ಕೈಪಿಡಿ ತಯಾರಿಕೆ, ಆಡಳಿತಾತ್ಮಕ ಪತ್ರಗಳ ಭಾಷಾಂತರ ಇಷ್ಟು ಯೋಜನೆಗಳನ್ನು ಕೈಗೊಳ್ಳಬೇಕಾಗಿದೆ. ಅಲ್ಲದೆ ವಿವಿಧ ಕಛೇರಿಗಳಿಗೆ ಕನ್ನಡ ಬೆರಳಚ್ಚುಗಾರರನ್ನು ಸರಬರಾಜು ಮಾಡಲಾಗುತ್ತಿದೆ.

ಆ) ಇಂತಿಷ್ಟೇ ಕಾಲವೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಇ) ರಚನೆಯಾಗಿದೆ ಸಿಬ್ಬಂದಿಯನ್ನು ಆದಷ್ಟು ಶೀಘ್ರವಾಗಿ ಇದಕ್ಕೆ ಸಂಬಂಧಿಸಿದಂತೆ ವರ್ಗ ಮತ್ತು ನೇಮಕಾತಿ ನಿಯಮಾವಳಿಗಳು ಮಂಜೂರಾದ ನಂತರ ಪರಿಗಣಿಸಲಾಗುವುದು.

ಶ್ರೀ ಪಿ. ರಾಂದೇವ್.—ಕನ್ನಡದ ಕೆಲಸ ಅಂದರೆ ಬಹಳ ಅಲಕ್ಷ್ಯದಿಂದ ನಡೆಯುತ್ತೆ. ಅಲ್ಲಿರತಕ್ಕ ಸಿಬ್ಬಂದಿಯ ವಿವರ ಕೊಡುತ್ತೀರಾ ? ಅಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಎಷ್ಟು ಸಂಬಳ ಕೊಡುತ್ತೀರಿ ? ನಾಲ್ಕನೇ ದರ್ಜೆ ನೌಕರರಿಗಿಂತಲೂ ಕಡಿಮೆ ಸಂಬಳ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಲ್ಲದೆ ೨೦ ದಿವಸಕ್ಕೆ ಒಮ್ಮೆ ತೆಗೆದುಕೊಂಡು, ಮನೆಗೆ ಕಳುಹಿಸುತ್ತಿದ್ದಾರೆ, ಸ್ನಾತಕೋತ್ತರ ಪದವಿ ಪಡೆದವರನ್ನು ಖಾಯಂಗೊಳಿಸದೆ ದಿನಗೂಲಿ ಮೇಲೆ ತೆಗೆದುಕೊಂಡಿರುವುದಕ್ಕೆ ಕಾರಣವೇನು ?

ಶ್ರೀ ಜೀವರಾಜ ಆಳ್ವ.—ಸಿ. ಅಂಡ್ ಆರ್. ರೂಲ್ಸ್ ಇನ್ನು ಆಗದೇ ಇರುವುದರಿಂದ ಭಾಷಾಂತರ ಕಾರರನ್ನು ಕಾಯಂಗೊಳಿಸುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ದಿನಗೂಲಿ ಅಂದರೆ ಅರ್ಥವೇನು ? ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಕೆಲಸ ಮಾಡುವವರನ್ನು ಏತಕ್ಕೆ ಕಾಯಂಗೊಳಿಸಿಲ್ಲ ?

ಶ್ರೀ ಜೀವರಾಜ ಆಳ್ವ.—ಸ್ವಾಮಿ, ಭಾಷಾಂತರಕಾರರಿಗೆ ಬೇಸಿಕ್ ಕ್ವಾಲಿಫಿಕೇಷನ್ ಫಿಕ್ಸ್ ಮಾಡಿದ್ದಾರೆ. ಅಲ್ಲಿ ಎಂ.ಎ ಡಾಕ್ಟರೇಟ್ ಜೊತೆಗೆ ಡಿಪ್ಲೊಮೋ ಇನ್ ಟ್ರಾನ್ಸ್‌ಲೇಷನ್ ಮಾಡಿದವರು ಇದ್ದಾರೆ. ಸಿ. ಅಂಡ್ ಆರ್. ರೂಲ್ಸ್ ಆಗದ ಕಾರಣ ಅಬಸಾರ್ ಮಾಡಲಿಕ್ಕೆ ತಡವಾಗಿದೆ. ಕೂಡಲೇ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ತಡವಾದರೆ ಬೇರೆ ಭಾಷಾಂತರಕಾರರಿಗೆ ಕೊಡುತ್ತಿರುವ ಸಂಬಳದಲ್ಲಿ ೧೦ ರೂಪಾಯಿ ಕಡಿಮೆ ಕೊಡಿ. ದಿನಗೂಲಿ ಮೇಲೆ ಏತಕ್ಕೆ ತೆಗೆದುಕೊಳ್ಳಬೇಕು ?

ಶ್ರೀ ಜೀವರಾಜ ಆಳ್ವ.—ತಮ್ಮ ಸಲಹೆಯನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಪಿ. ರಾಂದೇವ್. —೧೯೬೯ರಲ್ಲಿ ಸರ್ಕಾರ ಆಜ್ಞೆ ಹೊರಡಿಸಿ ಇಲಾಖೆಗಳಿಗೆ ಉಪಯೋಗವಾಗುವಂತೆ, ಆಡಳಿತ ಶಬ್ದಕೋಶಗಳ ಸಂಕಲನವನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದರು. ೧೯೩೩ರ ವರೆಗಾದರೂ ಆಗಿಲ್ಲ. ವಿಳಂಬವಾಗುವುದಕ್ಕೆ ಕಾರಣವೇನು ? ಎರಡನೆಯದಾಗಿ ಕನ್ನಡದಲ್ಲಿ ನಿಘಂಟು ಮಾಡಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತಿಗೆ ೧೫–೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ ಇನ್ನೂ ಮುಗಿದಿಲ್ಲ. ಇದು ಯಾವ ಹಂತದಲ್ಲಿದೆ ? ಮತ್ತು ಯಾವಾಗ ಮುಗಿಯುತ್ತದೆ ?

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎನ್. ಹುಚ್ಚೇಗೌಡ.—ಭಾಷಾಂತರಕಾರರ ಹುದ್ದೆಗೆ ಪ್ರಕಟಣೆ ಕೊಟ್ಟು, ನಿರ್ದಿಷ್ಟವಾದ ಕ್ವಾಲಿಫಿಕೇಷನ್ ಗೊತ್ತು ಮಾಡಿ ಅದರಂತೆ ತೆಗೆದುಕೊಳ್ಳುತ್ತೀರಾ ಅಥವಾ ಹಾಲಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಆದ್ಯತೆ ಕೊಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ನೇಮಕಾತಿ ಸಮಿತಿ ರಚನೆಯಾಗಿದೆ ಹಾಲಿ ಭಾಷಾಂತರಕಾರರಾಗಿ ಕೆಲಸ ಮಾಡುವವರಿಗೆಲ್ಲಾ ಅರ್ಜಿ ಹಾಕಿಕೊಳ್ಳಬಹುದು. ಅವರಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಇಲಾಖೆ ತೀರ್ಮಾನವಾಗಿದೆ. ಇಲಾಖೆಯಲ್ಲಿ ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.